ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 11/03/2020


# ಸ್ಪೀಕರ್ ತೀರ್ಪಿಗೆ ಕೋರ್ಟ್ ಪ್ರವೇಶವೇಕೆ?

» ವಿಧಾನಸಭೆಯಲ್ಲಿ ನ್ಯಾಯಾಲಯದ ತೀರ್ಪಿನ ಚರ್ಚೆ

ಸಭಾಧ್ಯಕ್ಷರ ತೀರ್ಪನ್ನು ನ್ಯಾಯಾಲಯಗಳು ರದ್ದು ಮಾಡಿರುವ ಸಂಗತಿಗಳು ವಿಧಾನಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು. ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಷೆಡ್ಯೂಲ್ 10ರ ಬಗ್ಗೆ ಪ್ರಸ್ತಾಪಿಸಿ, ಒಮ್ಮೆ ಸ್ಪೀಕರ್ ನೀಡಿದ ಆದೇಶವನ್ನು ರದ್ದು ಮಾಡುವುದು ಎಷ್ಟು ಸರಿ ಎಂದು ಕೋರ್ಟ್ ತೀರ್ಪನ್ನೇ ಪ್ರಶ್ನಿಸಿದರು. ವಿಧಾನಸಭಾಧ್ಯಕ್ಷರನ್ನು ನಾವೆಲ್ಲರೂ ಸೇರಿ ಆಯ್ಕೆ ಮಾಡಿರುತ್ತೇವೆ. ಅವರ ತೀರ್ಪನ್ನು ಎಲ್ಲರೂ ಗೌರವಿಸಲೇಬೇಕು. ಇತ್ತೀಚೆಗೆ ಈ ವಿಷಯದಲ್ಲಿ ನ್ಯಾಯಾಂಗದ ಮಧ್ಯಪ್ರವೇಶ ಹೆಚ್ಚಾಗಿದೆ ಎಂದರು. ಸಂವಿಧಾನದ 10ನೇ ಷೆಡ್ಯೂಲ್ ಮಾಡಿರುವುದಾದರೂ ಏಕೆ? ಸಭಾಧ್ಯಕ್ಷರ ಕಾರ್ಯವ್ಯಾಪ್ತಿಯಲ್ಲಿ ನ್ಯಾಯಾಧೀಶರು ಮಧ್ಯ ಪ್ರವೇಶಿಸಬಾರದು. ಅದಕ್ಕೆ ನಾವು ಅವಕಾಶ ಮಾಡಿಕೊಡಬಾರದು ಎಂದು ಹೇಳಿದ್ದಕ್ಕೆ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಧ್ವನಿಗೂಡಿಸಿ, ಸ್ಪೀಕರ್ ಪರಮಾಧಿಕಾರ ಪ್ರಶ್ನೆ ಮಾಡುವುದು ಸರಿಯಾದ ಕ್ರಮವಲ್ಲ ಎಂದರು. ನ್ಯಾಯಾಧೀಶರ ಬಗ್ಗೆ ನಾವು ಯಾರೂ ಕಾಮೆಂಟ್ ಮಾಡುವಂತಿಲ್ಲ. ಆದರೆ ಅದೇ ನ್ಯಾಯಾಧೀಶರು ನಮ್ಮ ಬಗ್ಗೆ ಮನಸ್ಸಿಗೆ ಬಂದಂತೆ ಮಾತನಾಡಬಹುದೇ? ಎಂದು ಬೋಪಯ್ಯ ಪ್ರಶ್ನಿಸಿದರು. ಮಧ್ಯೆ ಪ್ರವೇಶಿಸಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಜೈಪುರದಲ್ಲಿ ನಡೆದ ಸಮ್ಮೇಳನದಲ್ಲಿ 10ನೇ ಷೆಡ್ಯೂಲ್ ಬಗ್ಗೆ ಅಧ್ಯಯನ ಮಾಡಲು ಸಮಿತಿ ರಚನೆ ಮಾಡಲಾಗಿದೆ. ಅದರಲ್ಲಿ ನಾನೂ ಸದಸ್ಯನಾಗಿದ್ದೇನೆ. ಇದಕ್ಕೆ ಸಂಬಂಧಿಸಿದಂತೆ ಸದಸ್ಯರು ಸಲಹೆಗಳಿದ್ದರೆ ಕೊಡಬಹುದು ಎಂದರು.

## ಕಾಡಾನೆ ಪೀಡಿತ ಕ್ಷೇತ್ರ ಶಾಸಕರ ಸಭೆ

ಕಾಡಾನೆ ಪೀಡಿತ ವಿಧಾನಸಭಾ ಕ್ಷೇತ್ರಗಳ ಶಾಸಕರ ಸಭೆ ಕರೆಯಲು ಅರಣ್ಯ ಸಚಿವ ಆನಂದ್ ಸಿಂಗ್ ನಿರ್ಧರಿಸಿದ್ದಾರೆ. ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಕಾಡಾನೆ ಹಾವಳಿ ಬಗ್ಗೆ ಗಮನ ಸೆಳೆದರು. ಹಲವು ಶಾಸಕರು ದನಿ ಗೂಡಿಸಿದರು. ಉತ್ತರ ನೀಡಿದ ಸಿಂಗ್, ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕಲು ಆನೆದಾಳಿ ಪೀಡಿತ ಪ್ರದೇಶಗಳ ಶಾಸಕರ ಸಭೆ ಕರೆದು ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದರು.

ವೃದ್ಧ ಸಾವು: ಒಂಟಿಸಲಗ ದಾಳಿಗೆ ಸಿಲುಕಿ ತೀವ್ರ ಗಾಯಗೊಂಡಿದ್ದ ತುಮಕೂರು ಜಿಲ್ಲೆ ಕೋಳಿಹಳ್ಳಿಯ ವೃದ್ಧ ವೆಂಕಟಾಚಲಮೂರ್ತಿ ಚಿಕಿತ್ಸೆ ಫಲಿಸದೆ ಸೋಮವಾರ ತಡರಾತ್ರಿ ಮೃತಪಟ್ಟಿದ್ದಾರೆ.

## ಔರಾದ್ಕರ್ ವರದಿ ಅನುಷ್ಠಾನವಾಗಿಲ್ಲ

ಪೊಲೀಸ್ ಸಿಬ್ಬಂದಿಗೆ ಒದಗಿಸಬೇಕಾದ ವೇತನ ಇತರ ಭತ್ಯೆಗಳ ಬಗ್ಗೆ ರಾಘವೇಂದ್ರ ಔರಾದ್ಕರ್ ಸಮಿತಿ ನೀಡಿದ್ದ ಶಿಫಾರಸನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಿಲ್ಲ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ವಿಧಾನಸಭೆಯಲ್ಲಿ ಯಶವಂತ ರಾಯಗೌಡ ವಿಠ್ಠಲಗೌಡ ಪಾಟೀಲ್ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಸರ್ಕಾರ ತನ್ನ ನಿಲುವನ್ನು ಹೇಳಿಕೊಂಡಿದೆ. ಔರಾದ್ಕರ್ ಸಮಿತಿ ಪೊಲೀಸ್ ಇಲಾಖೆಯ 9 ವಿವಿಧ ವೃಂದದ ಅಧಿಕಾರಿ, ಸಿಬ್ಬಂದಿ ವೇತನ, ಭತ್ಯೆ ಪರಿಷ್ಕರಣೆ ಕುರಿತು 2019ರ ಜೂ.25ರಂದು ಶಿಫಾರಸು ಮಾಡಿ ವರದಿ ನೀಡಿತ್ತು. ಒಟ್ಟಾರೆ 84,773 ಅಧಿಕಾರಿ ಮತ್ತು ಸಿಬ್ಬಂದಿಗೆ ಅನುಕೂಲವಾಗಿದೆ. ಇನ್ನುಳಿದ 4 ವೃಂದದ ಅಧಿಕಾರಿ, ನೌಕರರ ವೇತನ ಶ್ರೇಣಿ ಪರಿಷ್ಕರಿಸುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಗೃಹ ಸಚಿವರು ಉತ್ತರಿಸಿದ್ದಾರೆ.

## ಟಿಪ್ಪು ಗಲಭೆ, 18 ಪ್ರಕರಣ ಹಿಂದಕ್ಕೆ

ಕೊಡಗಿನಲ್ಲಿ ಟಿಪ್ಪು ಜಯಂತಿ ಆಚರಣೆ ವೇಳೆ ಉಂಟಾದ ಗಲಭೆ ಹಿನ್ನೆಲೆ ದಾಖಲಾದ ಪ್ರಕರಣಗಳ ಪೈಕಿ 18 ಪ್ರಕರಣಗಳನ್ನು ಹಿಂದಕ್ಕೆ ಪಡೆಯಲು ಮಂಜೂರಾತಿ ನೀಡಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಬಿಜೆಪಿ ಸದಸ್ಯರೊಬ್ಬರ ಪ್ರಶ್ನೆಗೆ ಲಿಖಿತ ಉತ್ತರ ನೀಡಿ, 2015ರಲ್ಲಿ 47 ಪ್ರಕರಣ ದಾಖಲಾಗಿದ್ದರೆ, 2016ರಲ್ಲಿ 1, 2017ರಲ್ಲಿ 3 ದಾಖಲಾಗಿತ್ತು ಎಂದು ವಿವರಿಸಿದ್ದಾರೆ.